

## ಕೊಂಕಣಾ ಗರ್ಭಿಣಿನಾ?

ಹೌದು ಎನ್ನುತ್ತವೆ ಬಾಲಿವುಡ್ ಮೂಲಗಳು. ಅಷ್ಟೇನೂ ರೂಪವತಿ ಅಲ್ಲದಿದ್ದರೂ, ನಟನೆಯಿಂದಲೇ ಪ್ರತಿಯೊಬ್ಬರ ಹೃದಯ ಗೆದ್ದು ರಾಷ್ಟ್ರಪ್ರಶಸ್ತಿ ಪಡೆದಿದ್ದ ಕೊಂಕಣಾ ಕಳೆದ ಸೆಪ್ಟೆಂಬರ್‌ನಲ್ಲಿ ನಟ ರಣವೀರ್ ಶೌರಿ ಅವರೊಂದಿಗೆ ಮದುವೆಯಾದ ಸುದ್ದಿ ಬಂದಿದೆ.

ಅದರ ಬೆನ್ನಲ್ಲೇ ಕೊಂಕಣಾ ಗರ್ಭಿಣಿಯಾಗಿರುವ ಸುದ್ದಿ ಪ್ರಕಟವಾಗಿದೆ. ಹೀಗಾಗಿ ಮುಂದಿನ ಸೆಪ್ಟೆಂಬರ್‌ವರೆಗೆ ತಾನು ಯಾವುದೇ ಚಿತ್ರದಲ್ಲಿ ನಟಿಸುವುದಿಲ್ಲ ಎಂದು ನಿರ್ಮಾಪಕರಿಗೆ ಆಕೆ ಸ್ಪಷ್ಟವಾಗಿ ಹೇಳಿದ್ದಾಳಂತೆ. ಚಿತ್ರೀಕರಣದ ಸಂದರ್ಭದಲ್ಲಿ ಯಾವುದೇ ರೀತಿಯ ರಿಸ್ಕ್‌ಗಳನ್ನು ತೆಗೆದುಕೊಳ್ಳುವುದು ಬೇಡ ಎಂದು ಆಕೆಯ ವೈದ್ಯರು ಸ್ಪಷ್ಟವಾಗಿ ತಿಳಿಸಿದ್ದಾರಂತೆ.

ಆದರೂ ಈ ವಿಷಯ ಎಲ್ಲೂ ಸೋರಿ ಹೋಗದಿರಲಿ ಎಂದು ಪತಿ-ಪತ್ನಿಯರಿಬ್ಬರೂ ಸಾಕಷ್ಟು ಕಷ್ಟಪಟ್ಟರಂತೆ. ಆದರೆ ಅದು ರಟ್ಟಾಗದೆ ಗುಟ್ಟಾಗಿ ಉಳಿಯುವ ವಿಷಯವೇ..? ಇದೇ ವರ್ಷದ ಸೆಪ್ಟಂಬರ್‌ನಲ್ಲಿ ಶಾದಿ ಮಾಡಿಕೊಂಡ ಕೊಂಕಣಾ ಗರ್ಭಿಣಿಯಾದ ಸುದ್ದಿ ಅಕ್ಟೋಬರ್‌ನಲ್ಲಿ ಬರುತ್ತಿದೆ. ಇದು ಹೇಗೆ ಎಂದು ಬಾಲಿವುಡ್‌ನ 'ಸಿನಿ'ಕ ಪತ್ರಕರ್ತರು ತಲೆಕೆಡಿಸಿಕೊಂಡಿದ್ದಾರಂತೆ!



## 'ನಾಳೆ ಎಂಬುದು ಇಲ್ಲ..'



ಟ್ವೀಟರ್‌ನಲ್ಲಿ ಸದಾ ಟ್ವೀಟ್ ಟ್ವೀಟ್ ಎಂದು ಸದ್ದು ಮಾಡುತ್ತಿದ್ದ ಪ್ರಿಯಾಂಕಾ ಚೋಪ್ರಾ ಇದ್ದಕ್ಕಿದ್ದಂತೆ 'ನಾಳೆ ಎಂಬುದು ಇಲ್ಲ...' ಎಂಬ ಸಂದೇಶ ಹಾಕಿ ಕಾಣೆಯಾಗಿದ್ದಾರೆ. ರೇಡಿಯೋ, ಬಾಲಿವುಡ್ ಸುದ್ದಿ ಬಿತ್ತರಿಸುವ ಟಿವಿ ವಾಹಿನಿಗಳಲ್ಲಿ ಇದೊಂದು ದೊಡ್ಡ ಸುದ್ದಿಯಾಗಿದೆ.

ಇದೇ ಸಂದರ್ಭದಲ್ಲಿ ಆಕೆಯ ಮತ್ತೊಂದು ಸುದ್ದಿ ಇದೀಗ ಹರಿದಾಡುತ್ತಿದೆ. ಒಂದೇ ಫ್ಲಾಟ್ ಹಂಚಿಕೊಂಡಿದ್ದ ಪ್ರಿಯಾಂಕಾ ಹಾಗೂ ಶಾಹೀದ್ ಕಪೂರ್ ನಡುವಿನ ಸಂಬಂಧ ಮತ್ತೆ ಮುರಿದು ಬಿದ್ದಿದೆಯಂತೆ. ಇದಕ್ಕೆ ಪುಷ್ಟಿ ನೀಡುವಂತೆ ಪ್ರಿಯಾಂಕಾ ಜತೆ ಯಾವುದೇ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಶಾಹೀದ್ ನುಡಿದಿದ್ದಾನೆ. ಇದಕ್ಕೆ ಮುಖ್ಯ ಕಾರಣ ವೃತ್ತಿ ಹಾಗೂ ಜೀವನದಲ್ಲಿನ ಇಬ್ಬರ ವಿಚಾರಧಾರೆಗಳೂ ವಿಭಿನ್ನವಂತೆ. ಹೀಗಾಗಿ ಇವರಿಬ್ಬರೂ ತಮ್ಮ ಸಂಬಂಧದ ಕುರಿತೇ ಸ್ಪಷ್ಟ ನಿಲುವು ತೆಗೆದುಕೊಳ್ಳಲು ವಿಫಲರಾಗಿದ್ದಾರಂತೆ. ಹೀಗಾಗಿ ತಮ್ಮ ಸಂಬಂಧದ ಕುರಿತು ಇವರಿಬ್ಬರೂ ಗಟ್ಟಿಯಾಗಿ ಎಲ್ಲಿಯೂ ಹೇಳಿಲ್ಲ. ಮೊನ್ನೆ 'ಖತ್ರೋ ಕೆ ಕಿಲಾಡಿ' ಚಿತ್ರೀಕರಣ ಮುಗಿಸಿ ಬ್ರೆಜಿಲ್‌ನಿಂದ ಹಿಂದಿರುಗಿದ ಪ್ರಿಯಾಂಕಾ ತನ್ನ ಹಾಗೂ ಶಾಹೀದ್ ಕಪೂರ್‌ನ ಸಂಬಂಧಕ್ಕೆ ಎಳ್ಳು ನೀರು ಬಿಟ್ಟರಂತೆ.

## ಸಲ್ಮಾನ್ ಖಾನ್‌ಗೆ ಏಕೆ ಸುಲೋಚನ?



ಬಾಲಿವುಡ್‌ನಲ್ಲಿ ನಲವತ್ತು ದಾಟಿದರೂ 'ಎಲಿಜಬಲ್ ಬ್ಯಾಚುಲರ್' ಎಂಬ ಬಿರುದು ಪಡೆದ ಸಲ್ಮಾನ್ ಇತ್ತೀಚೆಗೆ ಏಕೋ ತಂಪು ಕನ್ನಡಕವಿಲ್ಲದೆ ಕಾಣಿಸಿಕೊಳ್ಳುತ್ತಿಲ್ಲವಂತೆ. ಇತ್ತೀಚೆಗೆ ಮುಂಬೈನಲ್ಲಿ ನಡೆದ 'ಬಿಗ್ ಬಾಸ್ 4', 'ಬಿಯಿಂಗ್ ಹ್ಯೂಮನ್ ವಾಚಸ್' ಹಾಗೂ 'ಬಿಯಿಂಗ್ ಹ್ಯೂಮನ್' ಫ್ಯಾಷನ್ ಶೋಗಳಲ್ಲೂ ಕತ್ತಲಿದ್ದರೂ ಕಪ್ಪು ಕನ್ನಡಕ ತೆಗೆಯಲು ನಿರಾಕರಿಸಿದನಂತೆ.

ಕನ್ನಡಕ (ಸುಲೋಚನ) ಏಕೆ ತೆಗೆಯುತ್ತಿಲ್ಲ ಎಂಬ ಪ್ರಶ್ನೆಗೆ 'ನನಗೇನು ಕನ್ನಡಕ ಅಗತ್ಯವಿಲ್ಲ. ಆದರೆ ನಾನು ಈ ಕನ್ನಡಕ ತೆಗೆದರೆ ನೋಡುಗರು ಭಯಭೀತರಾದಾರು ಎಂಬ ಚಿಂತೆ ನನಗೆ' ಎಂದು ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದ್ದಾರೆ.

ಸಲ್ಮಾನ್‌ನ ಈ ಕನ್ನಡಕ ಪುರಾಣದ ಹಿಂದಿನ ರಹಸ್ಯವೂ ಈಗ ಬಯಲಾಗಿದೆ. ಅದೇನೆಂದರೆ, ವಯಸ್ಸಿಗೆ ಸಹಜವಾಗಿ ಕಣ್ಣಿನ ಕೆಳಗೆ ಮೂಡುವ ನರಿಗೆಯನ್ನು ಸರಿಪಡಿಸಲು ಸಲ್ಮಾನ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದನಂತೆ. 'ದಬಾಂಗ್' ಚಿತ್ರದ ಸೂಪರ್ ಡೂಪರ್ ಹಿಟ್‌ನ ನಂತರ ಅವಕಾಶಗಳು ಹೆಚ್ಚಾಗಿರುವ ಕಾರಣ, ಮತ್ತಷ್ಟು ಯಂಗ್ ಆಗಿ ಕಾಣಿಸುವ ಬಯಕೆ ಆತನದ್ದು. ಹೀಗಾಗಿ ಪ್ಲಾಸ್ಟಿಕ್ ಸರ್ಜರಿ ಮೂಲಕ ಕಣ್ಣಿನ ಕೆಳಗೆ ಮೂಡಿದ್ದ ನರಿಗೆಯನ್ನು ಸರಿಪಡಿಸಿಕೊಂಡಿದ್ದಾನೆ. ಶಸ್ತ್ರಚಿಕಿತ್ಸೆ ನಂತರದ ಗಾಯವನ್ನು ತೋರಿಸಲಿಚ್ಛಿಸದ ಸಲ್ಮಾನ್ ಕನ್ನಡಕ ಧರಿಸುತ್ತಿದ್ದಾನೆ ಎಂದು ಬಾಲಿವುಡ್‌ನ ಮೂಲಗಳು ಗುಸುಗುಸು ಎನ್ನುತ್ತಿವೆ.

■ ಇಎಸ್‌ಎಸ್